526(947) ಶ್ರೀ ಪಾಟೀಲ್ ಎಂ ವೈ (ಅಫ್ಜಲ್‌ಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಸಂಖ್ಯೆಗಳೆಷ್ಟು,

ಆ) ಹೊಸದಾಗಿ ಈ ಜಿಲ್ಲೆಗೆ ಪದವಿ ಕಾಲೇಜನ್ನು ಪ್ರಾರಂಭಿಸಲು ಬೇಡಿಕೆಯಿರುವುದು ಸರ್ಕಾರದ ಗಮನದಲ್ಲಿದೆಯೇ,

ಇ) ಬಂದಿದ್ದಲ್ಲಿ, ಅಫಜಲಪುರ ಮತಕ್ಷೇತ್ರದಲ್ಲಿ ಕರಜಗಿ ಗ್ರಾಮಕ್ಕೆ ಪ್ರಥಮ ದರ್ಜೆ ಕಾಲೇಜು ಬೇಡಿಕೆ ಇರುವುದರಿಂದ, ಇದೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 10 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿರುತ್ತವೆ

ಆ) ಹೌದು

ಇ) ಅಫಜಲಪುರ ಮತಕ್ಷೇತ್ರ ಕರಜಗಿ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ನಿರ್ದಿಷ್ಟ ಪ್ರಸ್ತಾವನೆ ಬಂದಿರುವುದಿಲ್ಲ

527(348) ಶ್ರೀ ಎಸ್ ಎಸ್ ಸಾಟೀಲ (ಮುಂಡರಗಿ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಬಡಜನರಿಗೆ ಕಟ್ಟುವ ಮನೆಗಳು ಅಪೂರ್ಣಗೊಂಡಿರುವ ಬಗ್ಗೆ ಗ್ರಾಮವಾರು ವಿವರ ನೀಡುವುದು,

ಆ) ಈ ಮನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ಇ) ಎಷ್ಟು ವರ್ಷಗಳಿಂದ ಅಪೂರ್ಣವಾಗಿ ನಿಂತಿವೆ, (ವಿವರ ನೀಡುವುದು)?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) **ಗ್ರಾಮೀಣ ಪ್ರದೇಶ**

ಮುಂಡರಗಿ ಮತದಾರ ಕ್ಷೇತ್ರದ ಬಡಜನರಿಗೆ ಕಟ್ಟುವ ಮನೆಗಳು ಅಪೂರ್ಣಗೊಂಡಿರುವ ಗ್ರಾಮವಾರು ವಿವರ ಈ ಕೆಳಗಿನಂತಿದೆ ಇದರಲ್ಲಿ 2005–06ನೇ ಸಾಲಿನ ಮನೆಗಳು ಪ್ರಸ್ತುತ ಸಾಲಿನಲ್ಲಿ ಪ್ರಾರಂಭ–

ವಾಗಿರುವುದರಿಂದ 2005–2006 ಸಾಲಿಗಿಂತ ಹಿಂದಿನ ಶ್ರೇಣಿಯ 547 ಮನೆಗಳು ಮಾತ್ರ ಬಾಕಿ ಇರುತ್ತವೆ

ಕ್ರ. ಸಂ	ತಾಲ್ಲೂಕು	ಮತಕ್ಷೇತ್ರ	ಗ್ರಾಮದ ಹೆಸರು	ಮನೆಗಳ ಸಂಖ್ಯೆ
1	ಮುಂಡರಗಿ	ಮುಂಡರಗಿ	ಬಿದರಹಳ್ಳಿ	10
			ಹಮ್ಮಿಗಿ	6
			ಕೊರ್ಲಹಳ್ಳಿ	18
			ಬಾಗೇವಾಡಿ	34
			ಕಲಕೇರಿ	10
			ಯಕ್ಲಾಸಪೂರ	20
			ಡೋಣಿ ತಾಂಡಾ	39
			ಡಂಬಳ	152
			ಶಿಂಗಟರಾಯನಕೇರಿ ತಾಂಡಾ	72
			ಚುರ್ಚಿಹಾಳ	6
			ವೀರಾಪೂರ ತಾಂಡಾ	30
2	ಗದಗ	ಮುಂಡರಗಿ	ಕಳಸಾಪೂರ	35
			ಹರ್ಲಾಪೂರ	25
			ಶಿರುಂಜ	16
			ಶಿರೋಳಿ	2
			ಕಣವಿ	72
			ಒಟ್ಟು	**547**

ನಗರ ಪ್ರದೇಶ

ಕ್ರ ಸಂ	ಮತಕ್ಷೇತ್ರ	ಶ್ರೇಣಿ	ಪಟ್ಟಣದ ಹೆಸರು	ನಿಗದಿಪಡಿಸಿದ ಮನೆಗಳ ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಬಾಕಿ ಇರುವ ಮನೆಗಳು
1	ಮುಂಡರಗಿ	01–02	ಮುಂಡರಗಿ	223	223	0	0
			ಮುಳಗುಂದ	461	299	116	46
2	ಮುಂಡರಗಿ	03–04	ಮುಂಡರಗಿ	158	28	130	0
			ಮುಳಗುಂದ	141	74	67	0
3	ಮುಂಡರಗಿ	*05–06	ಮುಂಡರಗಿ	185	0	0	185
			ಮುಳಗುಂದ	115	0	0	115
ಒಟ್ಟು				**1283**	**624**	**313**	**346**

*2005–2006ನೇ ಶ್ರೇಣಿಯ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ

ಆ) **ಗ್ರಾಮೀಣ ಪ್ರದೇಶ**

ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ಮನೆಗಳನ್ನು ಮಾರ್ಚ್ 2007 ರೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ

ನಗರ ಪ್ರದೇಶ

ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಮನೆಗಳನ್ನು ಮುಂಡರಗಿ ಮತಕ್ಷೇತ್ರದಲ್ಲಿ ಪ್ರಗತಿಯಲ್ಲಿರುವ 313 ಮನೆಗಳನ್ನು ಫಲಾನುಭವಿಗಳೇ ಕಟ್ಟಿಕೊಳ್ಳುತ್ತಿರುವುದರಿಂದ ಮಾರ್ಚ್ 2007 ರೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ

ಇ) 3 ವರ್ಷಗಳಿಂದ ಅಪೂರ್ಣವಾಗಿರುವುದಕ್ಕೆ ವಿವರ ಈ ಕೆಳಗಿನಂತಿದೆ

1) ನಿವೇಶನ ಸಮಸ್ಯೆಯಿಂದಾಗಿ

2) ಸದರಿ ಮನೆಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂಸೇನಾ ನಿಗಮ ಇವರಿಗೆ ವಹಿಸಲಾಗಿದ್ದು, ಸದರಿ ಸಂಸ್ಥೆಯವರ ವಿಳಂಬದಿಂದ ನಿರ್ಮಾಣ ಕಾರ್ಯ ಅಪೂರ್ಣವಾಗಿದೆ ಈ ಕುರಿತು ದಿನಾಂಕ 16 1 2006ರಂದು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಜರುಗಿಸಿ ವಹಿಸಲಾಗಿರುವ ಎಲ್ಲಾ ಮನೆಗಳನ್ನು ಪೂರ್ಣಗೊಳಿಸಿ ವರದಿ ನೀಡುವಂತೆ ಸದರಿ ಏಜೆನ್ಸಿಗೆ ತಿಳಿಸಲಾಗಿದೆ

3) ಕೆಲವೊಂದು ಫಲಾನುಭವಿಗಳು ಮನೆಯನ್ನು ನಿರ್ಮಿಸಿಕೊಳ್ಳಲು ಆಸಕ್ತಿಯಿಲ್ಲದಿರುವುದರಿಂದ

528(350) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ ಮುಂಡರಗಿ ಜಿ ಗದಗ ಇದರ ಅಧ್ಯಕ್ಷರಿಗೆ 2004ನೇ ಸಾಲಿನಲ್ಲಿ ನಡೆದ ಜನರಲ್ ಕಮಿಟಿ ರರಾವಿನ ನಕಲು ಹಾಗೂ ಇತರೆ ಮಾಹಿತಿ ಕೇಳಿ ದಿನಾಂಕ 5 10 2005 ರಂದು ಪತ್ರ ಬರೆದಿದ್ದರೂ, ಈವರೆವಿಗೂ ಮಾಹಿತಿ ಕೊಟ್ಟಿರುವುದಿಲ್ಲ ಕಾರಣ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ,